47) ಕಣ್ಣೂರು
48) ಚಿಕ್ಕಮಾಲಪುರ ಚಿಕ್ಕಮಾಲಪುರ ಉಪ ಕೇಂದ್ರದಲ್ಲಿ ಎ ಎನ್ ಎಂ ಹುದ್ದೆ ಖಾಲಿ ಇದೆ

655 (701) ಶ್ರೀಮತಿ ಪರಿಮಳ ಕೆ ಎಸ್ (ಹನೂರು) – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹನೂರಿನಲ್ಲಿರುವ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವಂತೆ ಹಲವಾರು ವರ್ಷಗಳಿಂದ ಕೋರಿಕೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ, ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಈವರೆವಿಗೂ ಕ್ರಮ ಕೈಗೊಳ್ಳದಿರಲು ಕಾರಣವೇನು ,

ಇ) ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಇರುವ ತೊಂದರೆಗಳೇನು ,

ಈ) ಹಾಗಿದ್ದಲ್ಲಿ, ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದು ಯಾವಾಗ ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಬಂದಿದ

ಆ) ಬಂದಿರುವ ಪ್ರಸ್ತಾವನೆಯನ್ನು ಮಾರ್ಗಸೂಚಿ ಪ್ರಕಾರ ಪರೀಶೀಲಿಸಲಾಗುವುದು

656 (702) ಶ್ರೀಮತಿ ಪರಿಮಳ ಕೆ ಎಸ್ (ಹನೂರು) – ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಚಾಮರಾಜನಗರ ಜಿಲ್ಲೆಯ ಆಸ್ಪತ್ರೆಗಳಲ್ಲಿ ಮಂಜೂರಾದ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು ,

ಆ) ಈ ಪೈಕಿ ಭರ್ತಿಯಾದ ಹುದ್ದೆಗಳೇಷ್ಟು ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು ? (ಆಸ್ಪತ್ರೆವಾರು ವಿವರ ನೀಡುವುದು) ,

ಇ) ಹನೂರು ವಿಧಾನ ಸಭಾ ಕ್ಷೇತ್ರದಲ್ಲಿ ಯಾವ ಯಾವ ಆಸ್ಪತ್ರೆಗಳಲ್ಲಿ ವೈದ್ಯರ ಹುದ್ದೆಗಳು ಖಾಲಿ ಇವೆ ,

ಈ) ಹಾಗಿದ್ದಲ್ಲಿ, ಖಾಲಿ ಯಿರುವ ಈ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) --

ಅ) ಚಾಮರಾಜನಗರ ಜಿಲ್ಲೆಯ ಆಸ್ಪತ್ರೆಗಳಲ್ಲಿ ಮಂಜೂರಾದ ವೈದ್ಯರ ಹುದ್ದೆಗಳ ಸಂಖ್ಯೆ 90)ಆಸ್ಪತ್ರೆವಾರು ವಿವರಗಳನ್ನು ಅನುಬಂದ–1ರಲ್ಲಿ ನೀಡಿದೆ)

ಆ) ಈ ಪೈಕಿ ಭರ್ತಿಯಾದ ಹುದ್ದೆಗಳ ಸಂಖ್ಯೆ 8 (ಆಸ್ಪತ್ರೆವಾರು ವಿವರಗಳನ್ನು

ಅನುಬಂಧ 2ರಲ್ಲಿ ನೀಡಿದೆ)

ಇ) ಹನೂರು ವಿಧಾನಸಭಾ ಕ್ಷೇತ್ರದಲ್ಲಿ ರಾಮಪುರ ಬಂಡಳ್ಳಿ, ಕೂಡ್ಲೂರು ಮತ್ತು ಹನೂರುರಲ್ಲಿ ವೈದ್ಯರ ಹುದ್ದೆ ಖಾಲಿ ಇದೆ

ಈ) ಖಾಲಿ ಇರುವ ವೈದ್ಯರ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ದಿನಾಂಕ 26–8–2006 16–12–2006 ಮತ್ತು 13–4–2007 ರಂದು ಜಿಲ್ಲಾಧಿಕಾರಿಗಳು ಅರ್ಜಿ ಆಹ್ವಾನಿಸಿದರೂ ಯಾವ ಅಭ್ಯರ್ಥಿಯೂ ಸಹ ಸಂದರ್ಶನಕ್ಕೆ ಹಾಜರಾಗಿರುವುದಿಲ್ಲ ಹಾಗೂ ಅರ್ಜಿ ಬಂದಿಲ್ಲ

ಆ ಕು ಕ ನಿರ್ದೇಶನಾಲಯದಿಂದ ದಿನಾಂಕ 5–6–2007ರಲ್ಲಿ ಮೂರು ಮಂದಿ ವೈದ್ಯರನ್ನು ರಾಮಾಪುರ, ಅನುಚವಾಡಿ, ಕುದೇರುಗಳಿಗೆ ನೇಮಕಾತಿ ಮಾಡಿದ್ದರು ಸಹ ಯಾರು ಕರ್ಲವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ

ವಿಶೇಷ ನೇರ ನೇಮಕಾತಿ ಮುಖಾಂತರ 500 ವೈದ್ಯಾಧಿಕಾರಿಗಳ ಹುದ್ದೆ ಭರ್ತಿ ಮಾಡಲು ಸರ್ಕಾರದಿಂದ ಅನುಮತಿ ದೊರೆತಿದ್ದು ಮೊದಲನೇ ಹಂತದಲ್ಲಿ 250 ವೈದ್ಯಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ 2ನೇ ಹಂತದಲ್ಲಿ 250 ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ ನೇಮಕಾತಿ ಆದೇಶ ಹೊರಡಿಸುವಾಗ ಆದ್ಯತೆ ಮೇರೆಗೆ ಭರ್ತಿ ಮಾಡಲಾಗುವುದು

ಅನುಬಂಧ –1

ಚುಕ್ಕಿ ಗುರುತಿಲ್ಲದ ಪ್ರಶ್ನೆ ಸಂಖ್ಯೆ 702

ಚಾಮರಾಜನಗರ ಜಿಲ್ಲೆಯ ಆಸ್ಪತ್ರೆಗಳಲ್ಲಿ ಮಂಜೂರಾದ ವೈದ್ಯಾಧಿಕಾರಿ ಹುದ್ದೆಗಳ ವಿವರ

ತಾಲ್ಲೂಕಿನ ಹೆಸರು	ಪ್ರಾಥಮಿಕ ಆರೋಗ್ಯ ಕೇಂದ್ರದ ಹೆಸರು	ಮಂಜೂರಾತಿ	ಭರ್ತಿ	ಖಾಲಿ
ಚಾಮರಾಜನಗರ	ಚಾಮರಾಜನಗರ	2	2	–
	ಅರಳೀಕಟ್ಟೆ	1	1	–
	ಆಲೂರು	1	1	–
	ಬಿಸಲವಾಡಿ	1	1	–
	ಕಾಗಲವಾಡಿ	1	1	–
	ಹಳ್ಳಿಕೆರೆಹುಂಡಿ	1	1	–
	ಉಡಿಗಾಲ	1	1	–
	ಉಮ್ಮತ್ತೂರು	2	2	–

ಸಂತೇಮಾರನಹಳ್ಳಿ	1	1	–
ಕುದ್ಲೂರು	1	–	–
ಬಿಂದಕವಾಡಿ	1	1	–
ಸಂಚಾರಿ ಆರೋಗ್ಯ ಘಟಕ, ಚಂದವಾಡಿ	1	1	–
ಹಂಪೆ	1	1	–
ವೆಂಕಟಯ್ಯನಛತ್ರ	1	1	–
ಹಂದನಹಳ್ಳಿ	1	1	–
ಹೊಂಗನೂರು	1	1	–
ಅಮಚರವಾಡಿ	1	–	1
ಪುಣ್ಯದಹುಂಡಿ	1	1	–
ಬೇಡಗುಳಿ	1	1	–
ಕೊತ್ತಲವಾಡಿ	1	1	–
ಅರಕಲವಾಡಿ	1	1	
ಗುಂಡ್ಲುಪೇಟೆ ಸಾರ್ವಜನಿಕ ಆಸ್ಪತ್ರೆ	8	8	1
ಸಮುದಾಯ ಆರೋಗ್ಯ ಕೇಂದ್ರ ಕಬ್ಬಳ್ಳಿ			
ಕಗ್ಗಳದಹುಂಡಿ	1	1	–
ಹಂಗ	1	1	–
ಹೊಳಿಯಾಲ	1	1	–
ಪಡಗೂರು	1	1	–
ಬೀಗೂರು	1	1	–
ರಂಗನಾಥಪುರ	1	1	–
ಬೊಮ್ಮಲಾಪುರ	1	1	–
ಹೆಗ್ಗೆಹಳ್ಳಿ	1	1	–
ಬಾಹಳ್ಳಿ	1	1	–
ತರಕಣಾಂಬಿ	2	1	1
ದಿನಾಂಕ 31-05-07 ರಿಂದ ನಿವೃತ್ತಿ ಹೊಂದಿರುವ ಸಲುವಾಗಿ			
ಬರಗಿ	1	1	–
ಹುಂಡೀಪುರ	1	1	–

ಮಾದಪಟ್ಟಣ	1	1	–
ಬೊಮ್ಮನಹಳ್ಳಿ	1	1	–
ಬನ್ನಿತಾಳಪುರ	1	1	–
ಬಲಚಾವಾಡಿ	1	1	–
ಕುಂದುರು ಸಮುದಾಯ ಆರೋಗ್ಯ ಕೇಂದ್ರ	4	4	–
ಹೊನ್ನೂರು	1	1	–
ಗುಂಬಳ್ಳಿ	1	1	–
ಗೌಡಳ್ಳಿ	1	1	–
ಅಗರಮಾಂಬಳ್ಳಿ	1	1	–
ಕೊಳ್ಳೇಗಾಲ ಸಾರ್ವಜನಿಕ ಆಸ್ಪತ್ರೆ		7	7
ಸತ್ತೇಗಾಲ	2	2	–
ಪಾಳ್ಯ	1	1	–
ಚಿಲಕಾವಡಿ	1	1	–
ದೊಡ್ಡಿಂದುವಾಡಿ	1	1	–
ಕಾಮಗೆರೆ	2	2	–
ಕೊಕ್ಕನಹಳ್ಳಿ	1	1	–
ಬಂಡಳ್ಳಿ	1	–	1
ಉನ್ನತ ವ್ಯಾಸಂಗಕ್ಕೆ ತೈನಾತಿಸಿದ ಮೇರೆಗೆ			
ಕೂಡ್ಲೂರು	1	–	1
ಉನ್ನತ ವ್ಯಾಸಂಗಕ್ಕೆ ತೈನಾತಿಸಿದ ಮೇರೆಗೆ			
ರಾಮಪುರ	2	–	2
ಉನ್ನತ ವ್ಯಾಸಂಗಕ್ಕೆ ತೈನಾತಿಸಿದ ಮೇರೆಗೆ			
ಹನೂರು	2	1	1
ದಿ 30–06–07 ರಿಂದ ನಿವೃತ್ತಿ ಹೊಂದಿರುವ ಮೇರೆಗೆ			
ಮಧುವಿನಹಳ್ಳಿ	1	1	–
ಕೂನ್ನಾಟಿ	1	1	–

ಮಹದೇಶ್ವರ ಬೆಟ್ಟ	1	1	–
ಕೌದಳ್ಳಿ	1	1	–
ಡಿ ಜಿ ಪಾಳ್ಯ	1	1	–
ಮಾರ್ಟಳ್ಳಿ	1	1	–
ಸಂಚಾರಿ ಗಿರಿಜನ ಆರೋಗ್ಯ ಘಟಕ ಒಡೆಯರಪಾಳ್ಯ	1	1	–
ಸಂಚಾರಿ ಆರೋಗ್ಯ ಆರೋಗ್ಯ ಘಟಕ ಕೊಳ್ಳೇಗಾಲ	1	1	–
ರಾಷ್ಟ್ರೀಯ ಕುಷ್ಠ ರೋಗ ನಿಯಂತ್ರಣ ಕೇಂದ್ರ ಕೊಳ್ಳೇಗಾಲ	1	1	–
ಒಟ್ಟು	90	82	8

ಅಲ್ಪಸಂಖ್ಯಾತರ ಫಲಾನುಭವಿಗಳಿಗೆ ಸಾಲ ಮಂಜೂರಾತಿ

657 (703) ಶ್ರೀಮತಿ ಪರಿಮಳ ಕೆ ಎಸ್ (ಹನೂರು) – ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಅಲ್ಪಸಂಖಾತರ ಅಭಿವೃದ್ದಿ ನಿಗಮಕ್ಕೆ ಹನ್ನೂರು ವಿಧಾನಸಭಾ ಕ್ಷೇತ್ರದ ಅಲ್ಪಸಂಖ್ಯಾತರ ಫಲಾನುಭವಿಗಳಿಗೆ ಸಾಲ ಮಂಜೂರು ಮಾಡುವಂತೆ ಕೋರಿಕೆ ಬಂದಿರುವುದು ನಿಜವೇ ,

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) –

ಅ) ಹೌದು

ಆ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ನೀಡಿರುವ ಆಯವ್ಯಯದಲ್ಲಿ ಅಳವಡಿಸಿರುವ ಮೊತ್ತಕ್ಕೆ ಅನುಗುಣವಾಗಿ ಭೌತಿಕ ಗುರಿಯನ್ನು ಹಾಗೂ ಆರ್ಥಿಕ ಗುರಿಯನ್ನು ಎಲ್ಲಾ ತಾಲ್ಲೂಕಿಗೆ ನಿಗದಿಪಡಿಸಲಾಗಿದೆ ಹನೂರು ಮತಕ್ಷೇತ್ರಕ್ಕೆ ಈ ಕೆಳಗಿನ ಯೋಜನೆಗಳಡಿಯಲ್ಲಿ